
# ರೊಟ್ಟಿ ಮತ್ತು ಚಂದ್ರ

ಚಿಕ್ಕವನಿರುವಾಗ ಚಂದ್ರ ತೀರಾ ಹತ್ತಿರದವನಾಗಿದ್ದ
ಪ್ರತಿ ರಾತ್ರಿ ಅವನು ನನ್ನ ಗುಡಿಸಲ ಕಿಂಡಿಗಳಲಿ ಹಣಕುವಾಗ
ಹಸಿದ ಹೊಟ್ಟೆಗೆ ನಿದ್ದೆ ಬರಲೆಂದು
ಅಮ್ಮ ಹಾಡು ಹೇಳುತ್ತಿದ್ದಳು.
ಆಗ ನನಗವನು ರೊಟ್ಟಿಯ ತರಹ ಕಾಣುತ್ತಿದ್ದ.
ಸ್ಕೂಲಿನಲಿ 'ಚಂದ್ರ ಆಕಾಶದ ಹಾಲಿನಲಿ
ತೇಲುತಿರುವ ಬೆಣ್ಣೆ ಮುದ್ದೆ'
ಎಂಬ ಕವಿತೆ ಕೇಳಿದಾಗ ಮೇಸ್ಟ್ರಿಗೆ
ಬೆಣ್ಣೆಯೆಂದರೇನು ಅಂತ ಕೇಳಿ
ಒದೆ ತಿಂದಿದ್ದೆ...
ಇವತ್ತಿಗೂ ಚಂದ್ರನನ್ನ ನೋಡಿದಾಗ ನೆನಪಾಗುವುದು
ಹಸಿದುಕೊಂಡೇ ಹಾಡುತ್ತಿದ್ದ ಅಮ್ಮ ಮತ್ತು ಹಸಿವನ್ನೇ
ಕವಿತೆ ಮಾಡಿಕೊಂಡ ಅವತ್ತಿನ ಆ ಹುಡುಗ!



# ಬದಲಾದ ಚಂದ್ರ

ತುಂಡು ಭೂಮಿ
ಪುಟ್ಟ ಗುಡಿಸಲು
ಅಜ್ಜನ ಕಾಲದ ಬಟ್ಟಲು
ದಪ್ಪಕ್ಕಿ ನುಚ್ಚಿನ ಗಂಜಿ
ಹಸಿಮೆಣಸು
ಅವ್ವನ ಹಳೆಯ ಸೀರೆ ಹಾಸಿಗೆ
ತೋಳಿನ ದಿಂಬು
ಚಾವಣಿಯ ಸೋಗೆಯ ಸಂದಿಯೊಳಗಿನ ಚಂದ್ರ
ಕನಸಲ್ಲಿ ಬರುತ್ತಿದ್ದ ಊರಗೌಡನ ಮಗಳು!
ನಿಜಕ್ಕೂ ಪ್ರಪಂಚ ತುಂಬ ಚಿಕ್ಕದಿತ್ತು.

ಬದಲಾಗಿದೆ ಬದುಕಷ್ಟೇ ಅಲ್ಲ,
ನಾನು ಅವಳು, ಈಗೀಗ ಚಂದ್ರ ಸಹ!

• ಕು.ಸ. ಮಧುಸೂದನ ನಾಯರ್, ರಂಗೇನಹಳ್ಳಿ